**M.V.C.No.1429/2014** **RW-3**

ದಿನಾಂಕಃ **12/08/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಎದುರುದಾರ ಕಂಪನಿಯ ಅಸಿಸಟೆಂಟ್ ಮ್ಯಾನೇಜರ್ ಆಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ.

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಆರ್-2- Authorization letter

ನಿಶಾನೆ ಆರ್-3- ದೂರಿನ ಪ್ರತಿ

ನಿಶಾನೆ ಆರ್-4- FIR

ನಿಶಾನೆ ಆರ್-5- Charge sheet

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ

ಅಪಘಾತಕ್ಕೆ ಒಳಗಾದ KA-13-F-1353 ವಾಹನ ನಮ್ಮ ಕಂಪನಿಯಲ್ಲಿ ವಿಮೆ ಹೊಂದಿತ್ತು ಎಂದರೆ ಗೊತ್ತಿಲ್ಲ. KA-13-EB-8242 ವಾಹನಕ್ಕೆ ನಮ್ಮ ಕಂಪನಿಯಲ್ಲಿ ವಿಮೆ ಇತ್ತು ಎಂದರೆ ನಿಜ. ಅಪಘಾತ ಪರಿಹಾರ ಕೋರಿ ಅರ್ಜಿ ತಂದಿರುವ ಅರ್ಜಿದಾರರು ಬೈಕಿನ ಹಿಂಬದಿ ಸವಾರರಾಗಿದ್ದು ಅವರಿಗೆ contributory negligence ತತ್ವ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ಪಾಲಿಸಿಯ ಶರತ್ತುಗಳನ್ನು ಉಲ್ಲಂಘನೆ ಮಾಡಿರುವ ಕಾರಣ ನಾವು ಪರಿಹಾರ ಕೊಡಲು ಬರುವುದಿಲ್ಲ. ಅಪಘಾತದ ಪರಿಹಾರವನ್ನು ಕೊಡಲು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು